**ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವ ನ್ಯಾಯಾಲಯದಲ್ಲಿ**

**ಎಂ ವಿ ಸಿ ನಂ. 1255 /2024**

| | | |
|---|---|---|
| ಸಾಕ್ಷಿದಾರರ ಹೆಸರು | ಅಜಯ್ ಕುಮಾರ್ | PW 2 |
| ತಂದೆಯ / ಗಂಡನ ಹೆಸರು | ಅಚ್ಯುತಾಚಾರ್ | |
| ವಯಸ್ಸು | 28 ವರ್ಷ | |
| ಉದ್ಯೋಗ | ಮೆಡಿಕಲ್ ಇನ್ಚಾರ್ಜ್ ಆಫೀಸರ್ ಮಧುಶ್ರೀ ಮೆಡಿಕಲ್ಸ್, ಕರ್ಣ ಆಸ್ಪತ್ರೆ , ಹಾಸನ | |
| ವಾಸ ಸ್ಥಳ | ಹಾಸನ | ದಿನಾಂಕ 14-07-2026 |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಕೆ ಕೆ ಎಂ ವಕೀಲರಿಂದ ಅರ್ಜಿದಾರರ ಪರವಾಗಿ**

ಈಗ ನನಗೆ ತೋರಿಸಿದ ಮೆಡಿಕಲ್ ಬಿಲ್ಲುಗಳು ಜಯರಾಜ್ ರವರಿಗೆ ಸಂಬಂಧಪಟ್ಟ ಮೆಡಿಕಲ್ ಬಿಲ್ ಆಗಿದ್ದು ಸದರಿ ಬಿಲ್ಲನ್ನು ನಮ್ಮ ಕರ್ಣ ಆಸ್ಪತ್ರೆಯಿಂದ ನೀಡಲಾಗಿರುತ್ತದೆ. ಸದರಿ ಬಿಲ್ಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಬಿಲ್ ಗಳ ಸಹಿಯಲ್ಲಿ ವ್ಯತ್ಯಾಸ ಇದ್ದು ನಿಶಾನೆಯಾಗಿ ಗುರುತಿಸಲು ಎದುರುದಾರರ ಪರ ವಕೀಲರು ತಕರಾರು ಮಾಡಿದ್ದು, ಅವುಗಳನ್ನು ಎದುರುದಾರರ ಪರ ವಕೀಲರ ತಕರಾರಿಗೊಳಪಟ್ಟು ನಿ.ಪಿ 8 ರಿಂದ ನಿ.ಪಿ. 52 ಎಂದು ಗುರುತಿಸಲಾಯಿತು. ಪ್ರಿಸ್ಕ್ರಿಪ್ಷನ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 53 ರಿಂದ ನಿ.ಪಿ. 77 ಎಂದು ಗುರುತಿಸಲಾಯಿತು. ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 78 ಎಂದು ಗುರುತಿಸಲಾಯಿತು. ಆಥೋರೈಸೇಷನ್ ಲೆಟರನ್ನು ಹಾಜರುಪಡಿಸಿದ್ದು ಅದನ್ನು ನಿಪಿ 79 ಎಂದು ಗುರುತಿಸಲಾಯಿತು.

ನಿ.ಪಿ. 8 ಮತ್ತು 9 ಬಿಲ್ಲಿನಲ್ಲಿರುವ ಪಲ್ಲವಿ ಮತ್ತು ಜಗದೀಶ್ ನಮ್ಮ ಆಸ್ಪತ್ರೆಯಲ್ಲಿಯೇ ಕೆಲಸ ನಿರ್ವಹಿಸುತ್ತಿರುತ್ತಾರೆ. ನಿಪಿ 17 ಬಿಲ್ಲಿನಲ್ಲಿ ಸಹಿ ಇರುವ ರಕ್ಷಿತಾರವರು ನಮ್ಮ ಆಸ್ಪತ್ರೆಯ ಸಿಬ್ಬಂದಿಯಾಗಿರುತ್ತಾರೆ. ನಿಪಿ 20 ರಲ್ಲಿ ಸಹಿ ಇರುವ ಪ್ರಜ್ವಲ್ ಗೌಡ ನಮ್ಮ ಆಸ್ಪತ್ರೆಯ ಸಿಬ್ಬಂದಿಯಾಗಿರುತ್ತಾರೆ. ನಿಪಿ 8, 9 , 17 ಮತ್ತು 20 ಬಿಲ್ಲುಗಳನ್ನು ಮಧು ಶ್ರೀ ಮೆಡಿಕಲ್ಸ್ ಕರ್ಣ

ಆಸ್ಪತ್ರೆಯಿಂದ ನೀಡಲಾಗಿರುತ್ತದೆ. ನಾನು ಜಯರಾಜ್ ರವರ ಚಿಕಿತ್ಸೆಗೆ ಸಂಬಂಧಪಟ್ಟ ನಮ್ಮ ಆಸ್ಪತ್ರೆಯ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಜಯರಾಜ್ ರವರಿಗೆ ಸಂಬಂಧಪಟ್ಟ ಮೆಡಿಕಲ್ ಬಿಲ್ಲುಗಳನ್ನು ಪರಿಶೀಲನೆ ಮಾಡಿರುತ್ತೇನೆ. ಅರ್ಜಿದಾರರಿಗೆ ಸಂಬಂಧಪಟ್ಟ ಮೆಡಿಕಲ್ ಬಿಲ್ಲುಗಳಿಗೆ ಸಂಬಂಧಪಟ್ಟಂತೆ ಯಾವುದೇ ಸ್ಕೀಂ ನಿಂದ ಆಸ್ಪತ್ರೆಗೆ ಹಣ ಜಮೆಯಾಗಿರುವುದಿಲ್ಲ.

**ಶ್ರೀ ಯು ಎಂ ಸಿ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ

ಸಾಕ್ಷಿಯ ಸಹಿ